ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು. ಮಾಹಿತಿ ನೀಡುವುದು?

ಶ್ರೀ ಎ. ನಾರಾಯಣಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು) :

ಅ) ಹೌದು.

ಸೇಡಂ ತಾಲ್ಲೂಕು ಉಪ ಕಾರಾಗೃಹದ ಕಟ್ಟಡಕ್ಕೆ ದುರಸ್ತಿ ಹಾಗೂ ನವೀಕರಣ ಕಾಮಗಾರಿಗಳು ಅಗತ್ಯವಿರುತ್ತವೆ. ಅಲ್ಲದೆ ಕಾರಾಗೃಹದ ಸುತ್ತಲಿನ ಕಾಂಪೌಂಡ್ ಗೋಡೆಯು ಕೇವಲ 8 ಅಡಿ ಎತ್ತರವಿದ್ದು ಭದ್ರತಾ ದೃಷ್ಟಿಯಿಂದ ಅದನ್ನು 20 ಅಡಿಗಳಷ್ಟು ಎತ್ತರಿಸುವುದು ಅಗತ್ಯವಿರುತ್ತದೆ. ಕಾರಾಗೃಹಗಳ ದುರಸ್ತಿ ಹಾಗೂ ನವೀಕರಣಕ್ಕೆ ಹೆಚ್ಚಿನ ಅನುದಾನ ದೊರೆಯದೇ ಇರುವುದರಿಂದ ಪ್ರಸ್ತಾಪಿತ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಅನುದಾನ ಬಿಡುಗಡೆಯನ್ನಾಧರಿಸಿ ಲೋಕೋಪಯೋಗಿ ಇಲಾಖೆಯವತಿಯಿಂದ ಕಾಮಗಾರಿಗಳನ್ನು ಕೈಗೊಂಡು ಶೀಘ್ರವಾಗಿ ಕಾರಾಗೃಹವನ್ನು ಪ್ರಾರಂಭಿಸಲಾಗುವುದು.

ಸಿಂಧನೂರು ನಗರದಲ್ಲಿ ಕೊಳಚೆ ಪ್ರದೇಶಗಳು

118 (270) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಿಂಧನೂರು ಪಟ್ಟಣದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ಮತ್ತು ಯಾವುವು (ವಿವರಗಳನ್ನು ನೀಡುವುದು);

ಆ) ಸಿಂಧನೂರು ಪಟ್ಟಣದಲ್ಲಿರುವ ಕೊಳಚೆ ಪ್ರದೇಶಗಳ ಜನರಿಗೆ ಸರ್ಕಾರದ ಯಾವ ಯಾವ ಯೋಜನೆಗಳಿಂದ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ವಿವಿಧ ಯೋಜನೆಗಳಡಿ ನಿರ್ಮಿಸುತ್ತಿರುವ ಮನೆಗಳ ಕಾಮಗಾರಿಯು ಈಗ ಯಾವ ಹಂತದಲ್ಲಿದೆ.

ಈ) ವಿವಿಧ ಯೋಜನೆಗಳಡಿ ನಿರ್ಮಿಸುತ್ತಿರುವ ಮನೆಗಳಿಗೆ ಸರ್ಕಾರ ಇದುವರೆವಿಗೂ ನಿಗಧಿಪಡಿಸಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು, ಕಳೆದ ಮೂರು ವರ್ಷಗಳ ಹಾಗೂ ಯೋಜನೆಗಳವಾರು ವಿವರಗಳನ್ನು ನೀಡುವುದು.

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು) :

ಅ) ಸಿಂಧನೂರು ಪಟ್ಟಣದಲ್ಲಿ ಒಟ್ಟು 10 ಘೋಷಿತ ಕೊಳಚೆ ಪ್ರದೇಶಗಳಿದ್ದು, ವಿವರಗಳು ಈ ಕೆಳಕಂಡಂತಿದೆ.

1. ಸುಖಾಲ್ ಪೇಟೆ ಜನತಾ ಕಾಲೋನಿ
2. ಸುಖಾಲ್ ಪೇಟೆ ಟಿ.ಎಂ.ಸಿ. ಹತ್ತಿರ
3. ಮುನಿಸಿಪಲ್ ಕಾಲೋನಿ
4. ದೋಭಿಗಲ್ಲಿ
5. ಏ.ಕೆ. ಗೋಪಾಲ ನಗರ
6. ಇಂದ್ರಾನಗರ
7. 3ನೇ ಮೈಲ್ ಕ್ಯಾಂಪ್, ಎಡಬದಿ
8. ಲಕ್ಷ್ಮೀನಾರಾಯಣ ನಗರ (3ನೇ ಮೈಲ್ ಕ್ಯಾಂಪ್, ಬಲಬದಿ)
9. ಲಕ್ಷ್ಮೀ ಕ್ಯಾಂಪ್ (ಸುಂದರಯ್ಯನ ನಗರ)
10. ಗಂಗಾನಗರ, (ಎ.ಪಿ.ಎಂ.ಸಿ. ಬಸವನಗರ)

ಆ) ಸಿಂಧನೂರು ಪಟ್ಟಣದಲ್ಲಿನ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಿವಿಧ ಯೋಜನೆಯಡಿ ಕೈಗೊಂಡಿರುವ ಮನೆಗಳ ವಿವರಗಳು ಈ ಕೆಳಕಂಡಂತಿದೆ.

ಯೋಜನೆ ಹೆಸರು	ಮನೆಗಳ ಸಂಖ್ಯೆ
ಹುಡ್ಕೋ ಯೋಜನೆ	149
ವಾಂಬೆ ಯೋಜನೆ	49
ಐ.ಹೆಚ್.ಎಸ್.ಡಿ.ಪಿ. ಯೋಜನೆ	1005
ಒಟ್ಟು	**1203**

ಇ)

ಯೋಜನೆ ಹೆಸರು	ಮನೆಗಳ ಸಂಖ್ಯೆ	ಪ್ರಗತಿಯ ಹಂತ
ಹುಡ್ಕೋ ಯೋಜನೆ	149	ಪೂರ್ಣಗೊಂಡಿದೆ
ವಾಂಬೆ ಯೋಜನೆ	49	ಪೂರ್ಣಗೊಂಡಿದೆ
ಐ.ಹೆಚ್.ಎಸ್.ಡಿ.ಪಿ ಯೋಜನೆ	1005	746 ಮನೆಗಳು ಪೂರ್ಣಗೊಂಡಿದ್ದು ಉಳಿದ ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.

ಈ) ಕಳೆದ ಮೂರು ವರ್ಷಗಳಲ್ಲಿ IHSDP ಯೋಜನೆ ಹೊರತು ಪಡಿಸಿ, ಯಾವುದೇ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡಿರುವುದಿಲ್ಲ.

ಸದರಿ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನರ್ಮ್‌ನ IHSDP ಯೋಜನೆಯಡಿಯಲ್ಲಿ ನಿಗಧಿಪಡಿಸಿ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ಲಕ್ಷ. ರೂಗಳಲ್ಲಿ)

ಯೋಜನಾ ಮೊತ್ತ	ವರ್ಷ	ಕೇಂದ್ರ ಸರ್ಕಾರದ ಅನುದಾನ	ರಾಜ್ಯ ಸರ್ಕಾರದ ಅನುದಾನ	ಬಿಡುಗಡೆಯಾದ ಒಟ್ಟು ಅನುದಾನ
2317.93	2007–08	601.86	44.00	645.86
	2008–09	0	110.10	110.10
	2009–10	0	40.00	40.00
	2010–11	0	295.17	295.17
	2011–12	601.86	489.27	1091.13
	ಒಟ್ಟು	**1203.72**	**978.54**	**2182.26**